ಅವು ಹುಚ್ಚಾಳಂಬೆಯೆಂದು ತಿಳಿಯದೇ ಕಿತ್ತು ತಂದು ಸಾರು ಮಾಡಿದ್ದರು. ಇಬ್ಬರೂ ಗಡದ್ದು ತಿಂದಿದ್ದರಿಂದ ರಾತ್ರಿ ಪೂರ ವಾಂತಿ, ಭೇದಿಯಾಗಿ ನಿಪ್ರಾಣಿಯಾಗಿ ಅಸುನೀಗಿದ್ದರು. ಪದ್ಮಾ ಬೋರಾಡಿ ಅತ್ತಳು. ದೇವರಾಜ, ಅತ್ತೆ, ಮಾವ ಸಂತೈಸಿದರೂ ಅವಳ ಅಳು ನಿಲ್ಲಲಿಲ್ಲ. ಹಾಗೂ ಹೀಗೂ ಸಂಭಾಳಿಸಿದರು. ಅವರ ಮಣ್ಣು ಮಾಡಿ ಮನೆಗೆ ಬಂದರೂ ಪದ್ಮಾಳ ದುಃಖ ಕಡಿಮೆಯಾಗಲಿಲ್ಲ. ಗರ ಬಡಿದಂತೆ ಕುಳಿತಿರುವಾಗಲೇ ನೆನಪಿಸಿಕೊಂಡು ಏಕಾಏಕಿ ಜೋರು ಅಳುತ್ತಿದ್ದಳು. ಅತ್ತೆಮಾವ, ಗಂಡ ಅವಳ ಸ್ಥಿತಿಗೆ ಮಮ್ಮಲ ಮರುಗಿದರು. ಮಗುವಿನಂತೆ ಸಂತೈಸಿದರು. ಅವಳ ದುಃಖ ತಹಬಂದಿಗೆ ಬರಲು ತಿಂಗಳುಗಳೇ ಉರುಳಬೇಕಾಯಿತು.

ಕಾಲಕ್ಕೆ ಗಾಯ ಮಾಯಿಸುವ ಗುಣವಿದೆ. ದಿನಗಳು ಸರಿದಂತೆ ಅವಳ ಅಪ್ಪಅವ್ವನ ಸಾವಿನ ನೋವು ಮರೆಗೆ ಸರಿಯಿತು. ಅನುದಿನ ಅಡುಗೆ, ಕಸಮುಸರಿ, ಗಂಡ, ಅತ್ತೆಮಾವನ ಕಾಳಜಿ ಮಾಡುವುದರಲ್ಲೇ ದಿನಗಳು ಸವೆಯತೊಡಗಿದವು. ಮದುವೆಯಾಗಿ ಮೂರ್ನಾಲ್ಕು ವರ್ಷಗಳೇ ಕಳೆದವು. ಇನ್ನೂ ಮಕ್ಕಳಾಗಲಿಲ್ಲ. ಇದು ಅವಳಲ್ಲಿ ಕಳವಳ ಮೂಡಿಸಿತು. ಮನೆ ಮಂದಿಯಲ್ಲಾ ಆ ದೇವರು, ಈ ದೇವರಿಗೆ ನಡೆದುಕೊಂಡರು. ಬೇಡಿಕೊಂಡು ಹರಕೆ ತೀರಿಸಿದರು. ಏನೋರ ಹತ್ರ ಅಂತ್ರ ಕಟ್ಟಿಸಿದರು. ಪದ್ಮಾ ಮನೆ ದೇವರಿಗೆ ಬೇಡಿಕೊಂಡು ಪ್ರತಿ ವಾರ ಉಪವಾಸ ಮಾಡತೊಡಗಿದಳು. ಇದ್ಯಾವುದೂ ಫಲ ನೀಡಲಿಲ್ಲ.

ಅತ್ತೆಮಾವ ಈಗೀಗ ಇವಳ ಮ್ಯಾಲೆ ಸಿಡುಕತೊಡಗಿದರು. ಓಣಿ ಮಂದಿಯೂ ಮಕ್ಕಳಾಗಿಲ್ಲವೆಂದು ಆಡಿಕೊಳ್ಳುವುದು ಇವಳ ಕಿವಿಗೆ ಬಿದ್ದು ಹಿಂಸೆ ಅನಿಸತೊಡಗಿತ್ತು. ದೇವರಾಜನೂ ರಾತ್ರಿ ಅವಳ ಜೊತೆ ಮಲಗುತ್ತಿದ್ದನಷ್ಟೇ. ಹಗಲು ಮುಖ ಗಂಟು ಹಾಕಿಕೊಂಡು ಅಡ್ಡಾಡುತ್ತಿದ್ದ. ನಿತ್ಯ ಎಲ್ಲರೂ ಸಣ್ಣಸಣ್ಣ ತಪ್ಪು ಹುಡುಕಿ ಬಯ್ಯತೊಡಗಿದರು. ಇವಳು ಒಳಗೊಳಗೆ ನೋವು ತಿನ್ನ ತೊಡಗಿದಳು. ಒಮ್ಮೊಮ್ಮೆ ತನ್ನ ನಸೀಬು ಸರಿಯಿಲ್ಲವೆಂದು ತನ್ನನ್ನೇ ತಾನು ಹಳಿದುಕೊಳ್ಳುತ್ತಿದ್ದಳು. ಬಿಟ್ಟ ಕಣ್ಣು ಬಿಟ್ಟಂತೆ ನೆಲ ದಿಟ್ಟಿಸುತ್ತ ಕುಳಿತು ಬಿಡುತ್ತಿದ್ದಳು. ಮನೆಗೆಲಸದಲ್ಲೂ ಧ್ಯಾಸ ಕಡಿಮೆಯಾಯಿತು. ಅತ್ತೆಮಾವ, ಗಂಡನಿಗೆ ನೆಪ ಬೇಕಿತ್ತು. ಮನೆಗೆಲಸ ಸರಿ ಮಾಡುತ್ತಿಲ್ಲವೆಂಬ ನೆಪವಿಟ್ಟುಕೊಂಡು ಏಕಾಏಕಿ ಎಲ್ಲರೂ ಬೈಯ್ಗುಳದ ಮಳೆ ಸುರಿಸುತ್ತಿದ್ದರು. ಪದ್ಮಾ ಹೀಗೆ ಬಯ್ಯಿಸಿಕೊಂಡವಳಲ್ಲ. ಇದೆಲ್ಲಾ ಹೊಸತವಳಿಗೆ. ನಿತ್ಯ ಮಮಕಾರ ತೋರುತ್ತಿದ್ದವರೇ ಹೀಗೆ ಜಗಳ ಕಾಯುತ್ತಿರುವುದು ಅವಳನ್ನು ನೊಂದುಕೊಳ್ಳುವಂತೆ ಮಾಡಿತು. ಮಗು ಪಡೆಯದ ತನ್ನ ಈ ಸ್ಥಿತಿಯಿಂದಾಗಿಯೇ ಇವರೆಲ್ಲಾ ತನ್ನನ್ನು ಸೇರುತ್ತಿಲ್ಲವೆಂಬ ಸಂಗತಿಯನ್ನು ಮನಗಂಡಿರುವ ಅವಳಿಗೆ ಏನು ಮಾಡಬೇಕೋ ತೋಚದಾಯಿತು. ನಿತ್ಯ ಕೂಳು ಕಣ್ಣೀರು ಒಂದು ಮಾಡತೊಡಗಿದಳು.

★★★

ಪದ್ಮಾಳ ಅತ್ತೆ, ಮಾವನಿಗೂ ಚಿಂತೆ ಮನೆ ಮಾಡಿತು. ತಮ್ಮ ವಂಶ ಬೆಳೆಸುವ ಕುಡಿ ಪಡೆಯಲು ಅದೇನು ಮಾಡಬೇಕೋ ತಿಳಿಯದಾಯಿತು. ದೇವರಾಜನಿಗೆ ಮತ್ತೊಂದು ಮದುವೆ ಮಾಡಿದರೆ ಹ್ಯಾಗೆ ಎನ್ನುವ ಆಲೋಚನೆ ಅವರಲ್ಲಿ ಮೊಳೆಯಿತು. ಕೆಲ ಸಂಬಂಧಿಕರು ಮದುವೆ ಮಾಡುವುದೇ ಸರಿಯೆಂದು ಸಲಹೆ ನೀಡಿದರು. ಇದು ಪದ್ಮಾಳ ಕಿವಿ ತಲುಪಿ ವಿಚಿತ್ರ ಸಂಕಟದಲ್ಲಿ ಮುಳುಗಿದಳು. ದಿನಪೂರ್ತಿ ಮಾತಿಲ್ಲದೆ ಚಿಂತೆಯಲ್ಲೇ ಮುಳುಗಿದಳು. ಲೋಕದ ಪರಿವೆಯನ್ನೇ ಮರೆಯತೊಡಗಿದಳು. ಮುಸುರಿ ತಿಕ್ಕುವಾಗ ಒಂದೇ ದಬರಿಯನ್ನು ತಾಸೊತ್ತು ತಿಕ್ಕುತ್ತಿದ್ದಳು. ಒಲೆಯಲ್ಲಿ ಬೆಂಕಿ ಮಾಡದೆ ಒಲೆಯ ಮ್ಯಾಲೆ ಅನ್ನಕ್ಕೆ ಇಟ್ಟು, ಇನ್ನೇನು